ಶ್ರೀ ಆರ್. ಎಸ್. ನಾಯಕ್.—ದೋಷಪೂರಿತ ಕೊಳಚೆ ನೀರಲ್ಲ, ಒಳಚರಂಡಿ ವ್ಯವಸ್ಥೆ ಕೆಟ್ಟಿದೆ. ಇಂಪಾರ್ಟೆಂಟ್ ಇರುವುದು ಅಲ್ಲಿ.

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಅದು ಗೊತ್ತಿಲ್ಲ. ತಾವು ಕೊಟ್ಟಿರುವ ಈ ನೋಟಿಸ್‌ನಲ್ಲಿ ಏನಿದೆ ಎಂದರೆ ಒಳಚರಂಡಿಯಿಂದ ದೋಷಪೂರಿತ ನೀರು ಹೊರಹರಿದು ಕುಡಿಯುವ ನೀರಿನ ವ್ಯವಸ್ಥೆಯ ನಾಲೆಯಲ್ಲಿ ಇಳಿದಿದೆ ಎಂದು. ಅದಕ್ಕೆ ಉತ್ತರ ಕೊಡುತ್ತಿದ್ದೇನೆ. ಹಾಗೇನಾದರೂ ಆಗಿದ್ದರೆ ಇವತ್ತೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅದನ್ನು ನಿಲ್ಲಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಬಹುಶಃ ನಾನೇ ಅದನ್ನು ತಪ್ಪು ತಿಳಿದುಕೊಂಡಿರಬಹುದು. ಇವರು ಕೊಳಚೆನೀರು ಎಂದು ಹೇಳಿದರು. ಒಳಚರಂಡಿ ಬೇರೆ, ಕೊಳಚೆ ನೀರು ವ್ಯವಸ್ಥೆ ಬೇರೆ.

ಅಧ್ಯಕ್ಷರು.—ನಾಯಕ್‌ರವರೇ, ಮಂತ್ರಿಗಳ ಕೊಠಡಿಗೆ ಹೋಗಿ ಚರ್ಚಿಸಿ.

XXVI ಬಿ. ಎಂ. ಎಸ್. ಇಂಜಿನಿಯರಿಂಗ್ ಕಾಲೇಜು ತೆರೆಯುವ ಬಗ್ಗೆ

ಶ್ರೀ ರತ್ನಾಕರ ಪಟಮಕ್ಕಿ.—ಅಧ್ಯಕ್ಷರೇ, ಬಿಎಂಎಸ್ ಇಂಜಿನಿಯರ್ ಕಾಲೇಜ್ ಇದೇ ಮಾರ್ಚಿ ೨೫ನೇ ತಾರೀಖಿನಿಂದ ಮುಚ್ಚಿದೆ. ಸಪ್ಲಿಮೆಂಟರಿ ಪರೀಕ್ಷೆಗೆ ಕೂಡತಕ್ಕಂಥ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಹೀಗೆ ಯಾವ ಕಾಲೇಜೂ ಮುಚ್ಚುವುದಿಲ್ಲ, ಈ ಕಾಲೇಜು ಸಹ ಹಿಂದೆ ಮುಚ್ಚಿರಲಿಲ್ಲ. ಆದ್ದರಿಂದ ಹೊಸದಾಗಿ ಸೇರಿರತಕ್ಕಂಥ ವಿದ್ಯಾರ್ಥಿಗಳಿಗೆ ಹಾಗೂ ವಿದ್ಯೆಯನ್ನು ಕಲಿಯಬೇಕೆಂದು ಬರುವ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳಿಗೆ ತೊಂದರೆಯಾಗುತ್ತಿದೆ. ಸರ್ಕಾರ ಈ ಬಗ್ಗೆ ತೀವ್ರನಿಗಾ ವಹಿಸಿ ವಿದ್ಯಾರ್ಥಿಗಳ ಪಾಠಪ್ರವಚನಗಳಿಗೆ ತೊಂದರೆಯಾಗದಂತೆ ಸರ್ಕಾರ ಈ ಇಂಜಿನಿಯರಿಂಗ್ ಕಾಲೇಜನ್ನು ಕೂಡಲೇ ತೆರೆಯಬೇಕೆಂದು ವ್ಯವಸ್ಥೆ ಮಾಡಬೇಕೆಂದು ತಮ್ಮ ಕೇಳಿಕೊಳ್ಳುತ್ತೇನೆ. ಜೊತೆಗೆ ಈ ಕಾಲೇಜು ಮುಚ್ಚಿಸುವಲ್ಲಿ ಸೂಕ್ಷ್ಮ ರಾಜಕೀಯ ನಡೆದಿದೆ, ಇಂತಹ ರಾಜಕೀಯ ಶಕ್ತಿಗಳನ್ನು ದೂರವಿಟ್ಟು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕಾಲೇಜು ತೆರೆಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಮನವಿ ಮಾಡುತ್ತೇನೆ.

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಸಚಿವರು).—ಘನ್ಮಾನ್ಯ ಸಭಾಧ್ಯಕ್ಷರೇ, ಇದರಲ್ಲಿ ರಾಜಕೀಯ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಕಾಲೇಜನ್ನು ಮುಚ್ಚಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರಿಗೆ ತೊಂದರೆಯಾಗಿರುವುದು ನಿಜವಾಗಿದ್ದಲ್ಲಿ ಈಗಲೇ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ಅವರನ್ನು ಕರೆಸಿ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ ಮತ್ತು ಕಾಲೇಜಿನ ಪ್ರಾಂಶುಪಾಲರನ್ನೂ ಕರೆಸಿ ಮಾತನಾಡಿ ವಿದ್ಯಾರ್ಥಿಗಳಿಗೆ ಯಾವ ರೀತಿಯಲ್ಲೂ ತೊಂದರೆಯಾಗದಂತೆ ತರಗತಿಗಳು ನಡೆಯುವಂತೆ ನಾನು ಏರ್ಪಾಡು ಮಾಡುತ್ತೇನೆ.

೧೧-೦೦ ಎ. ಎಂ.

XXVII ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಬಹಿರಂಗಗೊಂಡಿರುವ ಬಗ್ಗೆ

ಶ್ರೀ ಬಿ ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಈಗ ಇಡೀ ರಾಜ್ಯಾದ್ಯಂತ ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ನಡೆಯುತ್ತಿವೆ. ೧-೪-೧೯೮೫ ರಂದು ಪರೀಕ್ಷೆ ಪ್ರಾರಂಭವಾಯಿತು. ೩೧-೩-೮೫ ರಂದೇ ಪ್ರಶ್ನೆ ಪತ್ರಿಕೆ ಹೊರಬಿದ್ದೆ ಬಂದಿದೆ. ೨ನೇ ತಾರೀಖು ನಡೆದ ಇಂಗ್ಲೀಷ್ ಪತ್ರಿಕೆಯು ಕೂಡ ಹಿಂದಿನ ದಿನವೇ ಪ್ರಶ್ನೆ ಪತ್ರಿಕೆ ಬಹಿರಂಗವಾಗಿದೆ. ಇದು ನನ್ನ ಗಮನಕ್ಕೆ ಬಂದಿದ್ದು ನಾನು ಇದನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ. ಈ ರೀತಿ ಪ್ರಶ್ನೆ ಪತ್ರಿಕೆಯು ಬಹಿರಂಗವಾಗುವುದಕ್ಕೆ ಏನು ಕಾರಣ ? ಇದರ ಸತ್ಯಾಸತ್ಯತೆಯನ್ನು ತಿಳಿಯಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ (ಮಾನ್ಯ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಯಡಿಯೂರಪ್ಪನವರು ಹೇಳಿದ ವಿಷಯ ನನ್ನ ಗಮನಕ್ಕೆ ೯ ಗಂಟೆಗೆ ಬಂದಿತು. ಆ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿರುತ್ತೇನೆ. ಮಾನ್ಯ ಯಡಿಯೂರಪ್ಪನವರು ಸೈನ್ ಮಾಡಿರುವ ಪ್ರಶ್ನೆ ಪತ್ರಿಕೆಯು ನನ್ನ ಹತ್ತಿರ ಇದೆ. ಈಗ ನಾನು ಅಧಿಕಾರಿಗಳಿಗೆ ಹೇಳಿದ ಪ್ರಕಾರ ಅವರು ಪರೀಕ್ಷೆಯ ಸಮಯದಲ್ಲಿ ಇವರು ಕೊಟ್ಟಿರುವ ಪ್ರಶ್ನೆಪತ್ರಿಕೆಗೂ ಮತ್ತು ಅಲ್ಲಿ ವಿದ್ಯಾರ್ಥಿಗಳನು ಬರೆಯುತ್ತಿರುವ ಪ್ರಶ್ನೆ ಪತ್ರಿಕೆಗೂ ಹೋಲಿಸಿ ನೋಡಿದಾಗ ಒಂದಕ್ಕೊಂದಕ್ಕೆ ಸಂಬಂಧವೇ ಇಲ್ಲವಾಗಿದೆ. ಇದು ಬೋಗಸ್ ಪ್ರಶ್ನೆಪತ್ರಿಕೆಯಾಗಿದೆ. ಯಾರು ಈ ತರಹ ಬೋಗಸ್ ಪ್ರಶ್ನೆ ಪತ್ರಿಕೆಗಳನ್ನು ಪ್ರಿಂಟ್ ಮಾಡಿ ಇದನ್ನು ಮಾರುತ್ತಿದ್ದಾರೋ ಗೊತ್ತಿಲ್ಲ. ಮೊನ್ನೆ ದಿನದ ಕನ್ನಡ ಪ್ರಶೆಪತ್ರಿಕೆಯನ್ನು ಕೂಡ ಹೋಲಿಸಿ ನೋಡಿದಾಗ ಒಂದಕ್ಕೊಂದಕ್ಕೆ ಸಂಬಂಧ ಇಲ್ಲ. ನಾನು ಹೇಳುವುದು ಏನೆಂದರೆ ಯಾವುದೇ ನಕಲಿ ಪ್ರಶ್ನೆಪತ್ರಿಕೆಯನ್ನೂ ವಿದ್ಯಾರ್ಥಿಗಳು ನಂಬಬಾರದು ಎಂದು ತಿಳಿಸುತ್ತೇನೆ. ಇಂಥಹ ಕೆಲಸ ಮಾಡುವವರನ್ನು ಹುಡುಕುವಂತೆ ಪೋಲೀಸರಿಗೆ ಆಜ್ಞೆ ಮಾಡಿದ್ದೇನೆ. ಯಾವ ವಿದ್ಯಾರ್ಥಿಗಳೇ ಆಗಲಿ ನಕಲಿ ಪ್ರಶ್ನೆ ಪತ್ರಿಕೆಯ ಬಗ್ಗೆ ಗಮನಕೊಡದೆ ತಮ್ಮ ಪರೀಕ್ಷೆಗಳ ಕಡೆ ಹೆಚ್ಚಿನ ಗಮನಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇಂಥಹ ನಕಲಿ ಪ್ರಶ್ನೆಪತ್ರಿಕೆಯ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಬಾರದು. ಆ ತರಹ ನಡೆದಿದ್ದೇ ಆದರೆ ಯಾವ ಅಧಿಕಾರಿಯೇ ಇರಲಿ ಅಂಥಹವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆ. ವಿದ್ಯಾರ್ಥಿಗಳಿಗೆ ಅನ್ಯಾಯವಾಗದ ರೀತಿಯಲ್ಲಿ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಈ ಕಾರ್ಯದಲ್ಲಿ ಯಾರು ತೊಡಗಿದ್ದಾರೆ ಎನ್ನುವುದನ್ನು ಪತ್ತೆ ಹಚ್ಚುವುದಕ್ಕೆ ಮಾನ್ಯ ಯಡಿಯೂರಪ್ಪನವರಿಗೆ ಯಾರು ಆ ಪ್ರಶ್ನೆಪತ್ರಿಕೆಯನ್ನು ತಂದುಕೊಟ್ಟರೋ ಅವರನ್ನೇ ಕೇಳಿದರೆ ಅಂಥಹವರು ಸಿಗಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮೊನ್ನೆ ದಿವಸ ತಂದುಕೊಟ್ಟಾಗ ನಂಬಿರಲಿಲ್ಲ. ಎರಡನೇ ದಿವಸ ತಂದಾಗ ನಕಲಿ ಪ್ರಶ್ನೆಪತ್ರಿಕೆಗೂ ಮೂಲ ಪ್ರಶ್ನೆ ಪತ್ರಿಕೆಗೂ ವೆರಿಫೈ ಮಾಡಿದಾಗ ಒಂದೇ ಆಗಿರುವುದು ಕಂಡು ಬಂತು. ಅದಕ್ಕೊಸ್ಕರ ಮಾನ್ಯ ಮಂತ್ರಿಗಳಿಗೆ ಇದರ ವಿಷಯವನ್ನು ತಿಳಿಸಿದ್ದೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಯಡಿಯೂರಪ್ಪನವರು ತೋರಿಸಿದ ಆಸಕ್ತಿಗೆ ಬಹಳ ಸಂತೋಷ ಇಂಥಾ ಅನೈತಿಕ ಪ್ರಶ್ನೆಪತ್ರಿಕೆಗಳಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇನೆ. ಇನ್ನು ಮಾಹಿತಿಗಳನ್ನು ಕೊಟ್ಟಿದ್ದಾರೆ, ತನಿಖೆ ನಡೆಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರು ಕೊಟ್ಟಿರತಕ್ಕ ಪ್ರಶ್ನೆ ಪತ್ರಿಕೆಯಲ್ಲಿರುವುದು ಒಂದು ಪ್ರಶ್ನೆಗೂ ಹೊಲಿಕೆ ಆಗಲಿಲ್ಲವೆ ?

ಶ್ರೀ ಎಂ. ರಘುಪತಿ.—ಹಿಸಿ ಪ್ರಶ್ನೆಗಳಲ್ಲಿ ಏಲ್ಲೂ ಒಂದೇ ಒಂದು ಪ್ರಶ್ನೆಗೆ ಹೋಲಿಕೆಯಾಗಿರುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್:—ಕಾಮ, ಪುಲ್‌ಸ್ಟಾಪ್ ಯಾವುದು ಹೋಲಿಕೆ ಆಗುವುದಿಲ್ಲವೆ ?

ಶ್ರೀ ಎಂ ರಘುಪತಿ.—ಅಂಥ ಹೋಲಿಕೆ ಯಾವುದು ಇಲ್ಲ.

ಶ್ರೀ ಮಲ್ಲಿಕಾರ್ಜುನ ಖಿರ್ಗೆ.—ಮಾನ್ಯ ಹೆಚ್. ಟಿ. ಕೃಷ್ಣಪ್ಪನವರು ಹೇಳಿದಹಾಗೆ ಈ ರೀತಿಯ ಬೋಗಸ್ ಪ್ರಶ್ನೆಪತ್ರಿಕೆಗಳನ್ನು ಯಾರು ತಂದುಕೊಟ್ಟರೋ ಅವರನ್ನೇ ವಿಚಾರಿಸಿದರೆ ಇದರ ಜಾಲ ಸಿಗಬಹುದು ಎಂದು ಹೇಳಿದರು. ಆದರಂತೆ ಈ ಸ್ಕೆಕ್ಲೊಸ್ಟೈಲ್ ಮಾಡಿ ಈ ರೀತಿಯ ಬೋಗಸ್ ಪ್ರಶ್ನೆಪತ್ರಿಕೆಗಳನ್ನು ಯಾರು ಹಂಚುತ್ತಿದ್ದಾರೆ ಎಂಬುದು ಗೊತ್ತಾಗಬಹುದು ಎಂದು ಕಾಣುತ್ತದೆ.

ಶ್ರೀ ಬಿ. ಎನ್. ಯಡಿಯೂರಪ್ಪ.—ನಿನ್ನೆ ರಾತ್ರಿ ಮಂತ್ರಿಗಳಿಗೂ ಕೂಡ ತಂದುಕೊಟ್ಟರು.